# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 309 |
| ಸದಸ್ಯರ ಹೆಸರು | ಶ್ರೀ ಟಿ.ಎ.ಶರವಣ |
| ಉತ್ತರಿಸುವ ದಿನಾಂಕ | 15/02/2023 |
| ಉತ್ತರಿಸುವವರು | ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ದೇವಸ್ಥಾನಗಳ ಆಸ್ತಿಗಳು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಇಲ್ಲಿಯವರೆಗೆ ಎಷ್ಟು ಒತ್ತುವರಿ ಆಸ್ತಿಗಳನ್ನು ತೆರವುಗೊಳಿಸಲಾಗಿದೆ. (ಜಿಲ್ಲಾವಾರು ವಿವರ ನೀಡುವುದು) | ಬಂದಿದೆ.<br><br>ಪ್ರಸಕ್ತ ಒತ್ತುವರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧಿಸೂಚಿತ ದೇವಾಲಯಗಳ ಜಮೀನುಗಳ ಪೈಕಿ ಒತ್ತುವರಿ ಆಗಿರುವ ಜಮೀನು/ಸ್ಥಿರಾಸ್ತಿಗಳ ತೆರವು ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ. ದಿನಾಂಕ:30-11-2022 ರವರೆಗೆ ಸ್ವೀಕೃತವಾದ ವರದಿಗಳಂತೆ 5782 ದೇವಾಲ್ಲಯಗಳ ಬಾಬ್ತು ಅಳತೆಯಾಗಿದ್ದು, ಪ್ರವರ್ಗವಾರು ದೇವಾಲಯಗಳ ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 34563 ಅಧಿಸೂಚಿತ ದೇವಾಲಯಗಳಿವೆ. ಅವುಗಳಲ್ಲಿ ಪ್ರವರ್ಗ"ಎ" 205 ದೇವಾಲಯಗಳಿರುತ್ತದೆ. ಅಲ್ಲದೇ ಪ್ರವರ್ಗ 'ಬಿ' 193 ದೇವಾಲಯಗಳು ಮತ್ತು ಪ್ರವರ್ಗ 'ಸಿ' 34165 ದೇವಾಲಯಗಳು ಇದ್ದು, ಸದರಿ ಬಿ ಮತ್ತು ಸಿ ಪ್ರವರ್ಗದ ದೇವಾಲಯಗಳ ಸ್ವತ್ತುಗಳಿಗೆ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ತಹಶೀಲ್ದಾರ್ ರವರೇ ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ.<br><br>ಮೇಲ್ಕಂಡ ಜಮೀನುಗಳ ಭೂದಾಖಲೆಗಳು ತಾಲ್ಲೂಕು ಕಛೇರಿಯ ತಹಶೀಲ್ದಾರ್ ರವರ ಸುಪರ್ಧಿಯಲ್ಲಿದ್ದು, ದೇವಾಲಯಕ್ಕೆ ಸೇರಿದ ಬಹುತೇಕ ಜಮೀನುಗಳು ಕರ್ನಾಟಕ ಇನಾಂ ರದ್ದಿಯಾತಿ ಕಾಯ್ದೆ ಮತ್ತು ಕರ್ನಾಟಕ ಭೂ ಸುಧಾರಣೆಯ ಕಾಯ್ದೆಯ ಅಡಿಯಲ್ಲಿ ಸರ್ಕಾರಕ್ಕೆ ವಿಹಿತವಾಗಿರುತ್ತದೆ. ಪಹಣಿಯಲ್ಲಿ ಮಂಜೂರು ವಿವರಗಳನ್ನು ಹಕ್ಕಿಗೆ ಸಂಬಂಧಿಸಿದ ವಿವರಗಳನ್ನು ಇಂಡೀಕರಿಸಿದ ನಂತರವೇ ಅಳತೆ ಮೂಲಕ ಒತ್ತುವರಿ ಗುರುತಿಸಬೇಕಾಗಿರುವುದರಿಂದ, ಮೊದಲಿಗೆ ಪಹಣಿಗಳನ್ನು ಇಂಡೀಕರಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ.<br><br>ಧಾರ್ಮಿಕ ದತ್ತಿ ಇಲಾಖೆಯಲ್ಲಿ ನೌಕರರ ಸಿಬ್ಬಂದಿಗಳ ತೀವ್ರ ಕೊರತೆ ಇರುವುದರಿಂದ ಧಾರ್ಮಿಕ ದತ್ತಿ ಇಲಾಖೆಯ ಜಮೀನುಗಳ ಒತ್ತುವರಿಯನ್ನು ಖುಲ್ಲಾಪಡಿಸಲು ಕಂದಾಯ ಇಲಾಖೆಯ ಅಧಿಕಾರಿಗಳನ್ನು ಅವಲಂಬಿಸಿದ್ದು, ಭೂದಾಖಲೆಗಳ ಉಪನಿರ್ದೇಶಕರುಗಳಿಂದ ಸ್ವೀಕೃತವಾದ ಒತ್ತುವರಿ ಮಾಹಿತಿಯನ್ನು ತಹಶೀಲ್ದಾರ್‌ರವರಿಗೆ ಪತ್ರ ವ್ಯವಹಾರ ಮೂಲಕ ಖುಲ್ಲಾಪಡಿಸಲು ಕೋರಲಾಗಿರುತ್ತದೆ. ವರದಿ ನಿರೀಕ್ಷಿಸಲಾಗಿದ್ದು, ಸದರಿ ವರದಿ ಸ್ವೀಕೃತವಾದ ನಂತರವಷ್ಟೆ ಇಲ್ಲಿಯವರೆಗೆ ಎಷ್ಟು ಒತ್ತುವರಿ ತೆರವುಗೊಳಿಸಲಾಗಿದೆ ಎಂಬ ಬಗ್ಗೆ ನಿಖರ ಮಾಹಿತಿ ಲಭ್ಯವಾಗುತ್ತದೆ. |
| ಆ) | ರಾಜ್ಯದಲ್ಲಿ ಒತ್ತುವರಿಯಾದ ದೇವಾಲಯಗಳ ಆಸ್ತಿಗಳ ಬಗ್ಗೆ (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಒತ್ತುವರಿಯಾದ ಅಧಿಸೂಚಿತ ದೇವಾಲಯಗಳ ಆಸ್ತಿಗಳ ಬಗ್ಗೆ ದಿನಾಂಕ:30-11-2022 ರವರೆಗೆ ಸ್ವೀಕೃತವಾದ ವರದಿಗಳಂತೆ 5782 ದೇವಾಲಯಗಳ ಬಾಬ್ತು ಅಳತೆ ಮಾಡಿ ಒತ್ತುವರಿ ಗುರುತಿಸಿದ್ದು, ಪ್ರವರ್ಗವಾರು ದೇವಾಲಯಗಳ ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |

. . . . 2

**ಇ)** ಸರ್ಕಾರವು ದೇವಾಲಯದ ಆಸ್ತಿಗಳ ಒತ್ತುವರಿ ತಡೆಯಲು ಮತ್ತು ಒತ್ತುವರಿಯಾಗಿರುವ ಆಸ್ತಿಗಳ ಸಂರಕ್ಷಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

- ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಆಸ್ತಿಗಳ ವಾಸ್ತವಿಕ ಪರಿಸ್ಥಿತಿ ಸಮೀಕ್ಷೆ ಮತ್ತು ಸಮರ್ಪಕ ಉಪಯೋಗ ಹಾಗೂ ಜಮೀನುಗಳ ರಕ್ಷಣೆಗೆ ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂ.ಇ.69.ಮುಅಬಿ.2008 ದಿನಾಂಕ:16-09-2008 ರಲ್ಲಿ ಸಮಿತಿಯನ್ನು ರಚಿಸಲಾಗಿದೆ. ಅದರಂತೆ ಇಲಾಖಾ ಅಧೀನಕ್ಕೆ ಒಳಪಡುವ ಆಸ್ತಿಗಳಲ್ಲಿನ ಒತ್ತುವರಿಗಳನ್ನು ತೆರವುಗೊಳಿಸಲು ಹಾಗೂ ಸಂರಕ್ಷಣೆ ಕಾರ್ಯಕೈಗೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಸ್ವತ್ತುಗಳಲ್ಲಿನ ಅನಧಿಕೃತ ಒತ್ತುವರಿದಾರರನ್ನು ಹೊರಹಾಕಲು ಧಾರ್ಮಿಕ ದತ್ತಿ ಇಲಾಖೆಯ ಕಾಯ್ದೆ ಮತ್ತು ನಿಯಮಗಳು ಮತ್ತು ಇತರೆ ಕಾಯ್ದೆಯಡಿಯಲ್ಲಿ ಕ್ರಮವಹಿಸಲಾಗುತ್ತಿದೆ.

- ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ/ಛತ್ರಗಳ ಜಮೀನು ಹಾಗೂ ಇತರೆ ಆಸ್ತಿಗಳನ್ನು ಆದ್ಯತೆ ಮೇರೆಗೆ ಅಳತೆ ಮಾಡಿ ನಕ್ಷೆ ತಯಾರಿಸಲು ಸಹಾಯಕ ದತ್ತಿ ಸಮೀಕ್ಷಾಧಿಕಾರಿಗಳಾಗಿರುವ ಭೂದಾಖಲೆಗಳ ಉಪ ನಿರ್ದೇಶಕರಿಗೆ ಸೂಚಿಸುವಂತೆ ಹಾಗೂ ಕನಿಷ್ಠ ತಿಂಗಳಿಗೆ ಒಂದು ತಾಲ್ಲೂಕಿನಲ್ಲಿ 5 ದೇವಾಲಯಗಳ ದಾಖಲೀಕರಣ ಮಾಡಿ ವರದಿಯನ್ನು ಮಾಸಿಕ ಪ್ರಗತಿ ತ:ಖ್ತೆಯಲ್ಲಿ ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ ಇವರಿಗೆ ಕಡ್ಡಾಯವಾಗಿ ಸಲ್ಲಿಸುವಂತೆ ಜಿಲ್ಲೆಯ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ಅ.ಸ. ಪತ್ರ ಸಂ:1265/2020 ರಲ್ಲಿ ದಿನಾಂಕ:11.12.2020ರಂದು ಸೂಚನೆಯನ್ನು ನೀಡಿರುತ್ತಾರೆ.

- ಅಧಿಸೂಚಿತ ದೇವಸ್ಥಾನಕ್ಕೆ ಸೇರಿದ ಸ್ಥಿರ ಸ್ವತ್ತುಗಳ ನಿರ್ವಹಣೆ ಸಂಬಂಧ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಎನ್.ಐ.ಸಿ.ಯ ಮೂಲಕ ಆನ್‌ಲೈನ್ ತಂತ್ರಾಂಶ (Integrated Temple Management System/ **ITMS**) ವನ್ನು ಜಾರಿಗೆ ತರಲಾಗಿದೆ. ಸದರಿ ತಂತ್ರಾಂಶದಲ್ಲಿ ಹಂತ-ಹಂತವಾಗಿ ದೇವಾಲಯಗಳ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮಾಹಿತಿ ಮತ್ತು ಅವುಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮಾಡ್ಯೂಲ್‌ಗಳನ್ನು ಅಭಿವೃದ್ಧಿ ಪಡಿಸಿ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

- ಸರ್ಕಾರದ ಆದೇಶ ಸಂಖ್ಯೆ:ಕಂಇ 49 ಮುಆಬಿ 2021 ಬೆಂಗಳೂರು ದಿನಾಂಕ:05-09-2022ರ ಆದೇಶದಂತೆ ಮುಜರಾಯಿ ಇಲಾಖೆಯ ಅಧಿಸೂಚಿತ ಸಂಸ್ಥೆಗಳ ಜಮೀನುಗಳ ಸಂರಕ್ಷಣೆಗೆ ದೇವಾಲಯಗಳ ಹಕ್ಕು ದಾಖಲೆಗಳ ಇಂಡೀಕರಣ, ಅಳತೆ ಕಾರ್ಯ, ಒತ್ತುವರಿ ತೆರವು ಗೊಳಿಸುವಿಕೆ ಕಾರ್ಯರೂಪಕ್ಕೆ ತರಲು ಕಟ್ಟುನಿಟ್ಟಿನ ಸೂಚನೆಯನ್ನು ನೀಡಿದೆ.

ಧಾರ್ಮಿಕ ದತ್ತಿ ಇಲಾಖೆಯ ಸ್ಥಿರಾಸ್ತಿಗಳ ಸಂರಕ್ಷಣೆ ಕಾರ್ಯಗಳಾದ ಕಂದಾಯ ದಾಖಲೆಗಳ ಇಂಡೀಕರಣ, ಅಳತೆ ಕಾರ್ಯ, ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಆಸ್ತಿಗಳ ತೆರವುಗೊಳಿಸುವಿಕೆಯಲ್ಲಿ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸಲು ರಾಜ್ಯ ಮಟ್ಟದ/ ಜಿಲ್ಲಾ ಮಟ್ಟದ ಸಮಿತಿಯನ್ನು ಸರ್ಕಾರವು ರಚಿಸಿದೆ.

**ರಾಜ್ಯ ಮಟ್ಟದ ಸಮಿತಿ:-**

| | | |
|---|---|---|
| 1. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಂದಾಯ ಇಲಾಖೆ | ಅಧ್ಯಕ್ಷರು |
| 2. | ಆಯುಕ್ತರು, ಭೂಮಾಪನ ಇಲಾಖೆ | ಸದಸ್ಯರು |
| 3. | ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ | ಸದಸ್ಯರು |
| 4. | ಜಂಟಿ ನಿರ್ದೇಶಕರು, ಭೂಮಾಪನ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

**ಜಿಲ್ಲಾ ಮಟ್ಟದ ಸಮಿತಿ :-**

| | | |
|---|---|---|
| 1 | ಜಿಲ್ಲಾಧಿಕಾರಿ | ಅಧ್ಯಕ್ಷರು |
| 2 | ಅಪರ ಜಿಲ್ಲಾಧಿಕಾರಿ | ಸದಸ್ಯರು |
| 3 | ಉಪವಿಭಾಗಾಧಿಕಾರಿ | ಸದಸ್ಯರು |
| 4 | ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ (ಸ್ಥಳೀಯ ಸಂಸ್ಥೆ) | ಸದಸ್ಯರು |
| 5 | ತಾಂತ್ರಿಕ ಸಹಾಯಕರು ಹಾಗೂ ಭೂದಾಖಲೆಗಳ ಉಪನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

ಜಿಲ್ಲಾಧಿಕಾರಿಗಳು ಅವರ ಹಂತದಲ್ಲಿ ಸಭೆಯನ್ನು ಜರುಗಿಸಿ ಜಿಲ್ಲಾಮಟ್ಟದಲ್ಲಿ ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ಕಂಇ 21 ಮುಸಪ್ರ 2023

(ಶಶಿಕಲಾ. ಅ.ಜೊಲ್ಲೆ)
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು

Q? NO 309

"ಎ" ಪ್ರವರ್ಗದ ದೇವಸ್ಥಾನಗಳ ಮಾಹಿತಿ

ಅನುಬಂಧ-01

| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು ದೇವಾಲಯಗಳ ಸಂಖ್ಯೆ | ಅಳತೆಯಾದ ಎ ದೇವಾಲಯಗಳ ಸಂಖ್ಯೆ | ಬಾಕಿ ಇರುವ ಎ ದೇವಾಲಯಗಳ ಸಂಖ್ಯೆ | ಒತ್ತುವರಿಯಾದ ದೇವಾಲಯದ ಸಂಖ್ಯೆ | ಒತ್ತುವರಿ ವಿಸ್ತೀರ್ಣ | |
|---|---|---|---|---|---|---|---|
| | | | | | | ಎಕರೆ | ಗುಂಟೆ/ಸೆಂಟ್ಸ್ |
| 1 | Bagalkote | 0 | 0 | 0 | 0 | 0 | 0 |
| 2 | Bengaluru Urban | 21 | 13 | 8 | 2 | 0 | 5 |
| 3 | Bengaluru Rural | 3 | 2 | 1 | 1 | 0 | 5 |
| 4 | Belagavi | 5 | 5 | 0 | 0 | 0 | 0 |
| 5 | Bellary | 4 | 1 | 3 | 0 | 0 | 0 |
| 6 | Bidar | 7 | 3 | 4 | 0 | 0 | 0 |
| 7 | Chamarajnagar | 2 | 1 | 1 | 0 | 0 | 0 |
| 8 | Chikkaballapur | 3 | 3 | 0 | 0 | 0 | 0 |
| 9 | Chikkamangaluru | 3 | 2 | 1 | 0 | 0 | 0 |
| 10 | chitradurga | 4 | 3 | 1 | 0 | 0 | 0 |
| 11 | Dakshina Kannada | 43 | 15 | 28 | 5 | 14 | 9.7 |
| 12 | Davanagere | 2 | 0 | 2 | 0 | 0 | 0 |
| 13 | Dharwad | 0 | 0 | 0 | 0 | 0 | 0 |
| 14 | Gadag | 0 | 0 | 0 | 0 | 0 | 0 |
| 15 | kalburgi | 4 | 4 | 0 | 0 | 0 | 0 |
| 16 | Hassan | 5 | 1 | 4 | 0 | 0 | 0 |
| 17 | Haveri | 1 | 0 | 1 | 0 | 0 | 0 |
| 18 | Kodagu | 3 | 3 | 0 | 3 | 287 | 27 |
| 19 | Kolar | 6 | 6 | 0 | 0 | 0 | 0 |
| 20 | Koppala | 3 | 0 | 3 | 0 | 0 | 0 |
| 21 | Mandhya | 9 | 4 | 5 | 1 | 0 | 7 |
| 22 | Mysuru | 6 | 3 | 3 | 2 | 7 | 39 |
| 23 | Raichur | 4 | 2 | 2 | 1 | 0 | 30 |
| 24 | Ramanagar | 7 | 3 | 4 | 3 | 13 | 21 |
| 25 | Shivamoga | 4 | 4 | 0 | 0 | 0 | 0 |
| 26 | Tumkur | 10 | 4 | 6 | 2 | 1 | 1.75 |
| 27 | Udupi | 26 | 6 | 20 | 2 | 1 | 2.5 |
| 28 | Uttara Kannada | 10 | 9 | 1 | 0 | 0 | 0 |
| 29 | Vijayanagar | 8 | 4 | 4 | 1 | 0 | 45 |
| 30 | Vijayapura | 0 | 0 | 0 | 0 | 0 | 0 |
| 31 | Yadgiri | 2 | 1 | 1 | 0 | 0 | 0 |
| | | 205 | 102 | 103 | 23 | | |

ಷರಾ: ಆಯಾ ಪ್ರದೇಶಗಳಲ್ಲಿ ಬಳಸುವ ಅಳತೆಮಾಪಕ(units of measurement)ಕ್ಕನುಸಾರವಾಗಿ ಎಕರೆ/ಗುಂಟೆ ಅಥವಾ ಎಕರೆ/ಸೆಂಟ್ಸ್ ಗಳಲ್ಲಿ ಒತ್ತುವರಿ ವಿಸ್ತೀರ್ಣವನ್ನು ದಾಖಲಿಸಿದೆ.

Q No-309

"ಬಿ" ಪ್ರವರ್ಗದ ಜಿಲ್ಲಾವಾರು ಮಾಹಿತಿ

ಅನುಬಂಧ-01

| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು ದೇವಾಲಯಗಳ ಸಂಖ್ಯೆ | ಅಳತೆಯಾದ ಬಿ ದೇವಾಲಯಗಳ ಸಂಖ್ಯೆ | ಬಾಕಿ ಇರುವ ಬಿ ದೇವಾಲಯಗಳ ಸಂಖ್ಯೆ | ಒತ್ತುವರಿಯಾದ ದೇವಾಲಯದ ಸಂಖ್ಯೆ | ಒತ್ತುವರಿ ವಿಸ್ತೀರ್ಣ | |
|---|---|---|---|---|---|---|---|
| | | | | | | ಎಕರೆ | ಗುಂಟೆ/ಸೆಂಟ್ಸ್ |
| 1 | Bagalkote | 2 | 0 | 2 | 0 | 0 | 0 |
| 2 | Bengaluru Urban | 16 | 6 | 10 | 2 | 31 | 37 |
| 3 | Bengaluru Rural | 5 | 3 | 2 | 0 | 0 | 0 |
| 4 | Belagavi | 6 | 5 | 1 | 0 | 0 | 0 |
| 5 | Bellary | 7 | 4 | 3 | 0 | 0 | 0 |
| 6 | Bidar | 3 | 0 | 3 | 0 | 0 | 0 |
| 7 | Chamarajnagar | 1 | 0 | 1 | 0 | 0 | 0 |
| 8 | Chikkaballapur | 4 | 3 | 1 | 2 | 23 | 32 |
| 9 | Chikkamangaluru | 10 | 7 | 3 | 0 | 0 | 0 |
| 10 | chitradurga | 4 | 4 | 0 | 0 | 0 | 0 |
| 11 | Dakshina Kannada | 37 | 24 | 13 | 4 | 9 | 38 |
| 12 | Davanagere | 8 | 1 | 7 | 0 | 0 | 0 |
| 13 | Dharwad | 0 | 0 | 0 | 0 | 0 | 0 |
| 14 | Gadag | 0 | 0 | 0 | 0 | 0 | 0 |
| 15 | kalburgi | 2 | 0 | 2 | 0 | 0 | 0 |
| 16 | Hassan | 7 | 4 | 3 | 1 | 2 | 6 |
| 17 | Haveri | 11 | 0 | 11 | 0 | 0 | 0 |
| 18 | Kodagu | 0 | 0 | 0 | 0 | 0 | 0 |
| 19 | Kolar | 7 | 7 | 0 | 0 | 0 | 0 |
| 20 | Koppala | 1 | 0 | 1 | 0 | 0 | 0 |
| 21 | Mandhya | 13 | 0 | 13 | 0 | 0 | 0 |
| 22 | Mysuru | 4 | 0 | 4 | 0 | 0 | 0 |
| 23 | Raichur | 1 | 1 | 0 | 0 | 0 | 0 |
| 24 | Ramanagar | 5 | 0 | 5 | 0 | 0 | 0 |
| 25 | Shivamoga | 1 | 1 | 0 | 0 | 0 | 0 |
| 26 | Tumkur | 6 | 2 | 4 | 0 | 0 | 0 |
| 27 | Udupi | 17 | 0 | 17 | 0 | 0 | 0 |
| 28 | Uttara Kannada | 6 | 6 | 0 | 0 | 0 | 0 |
| 29 | Vijayanagar | 5 | 3 | 2 | 0 | 0 | 0 |
| 30 | Vijayapura | 1 | 0 | 1 | 0 | 0 | 0 |
| 31 | Yadgiri | 3 | 2 | 1 | 0 | 0 | 0 |
| | | 193 | 83 | 110 | 9 | | |

ಸೂಚನೆ: ಆಯಾ ಪ್ರದೇಶಗಳಲ್ಲಿ ಬಳಸುವ ಅಳತೆಮಾಪನ(units of measurement)ಕ್ಕನುಸಾರವಾಗಿ ಎಕರೆ/ಗುಂಟೆ ಅಥವಾ ಎಕರೆ/ಸೆಂಟ್ಸ್ ಗಳಲ್ಲಿ ಒತ್ತುವರಿ ವಿಸ್ತೀರ್ಣವನ್ನು ದಾಖಲಿಸಿದೆ.

Q No: 309

"ಸಿ" ಪ್ರವರ್ಗದ ಜಿಲ್ಲಾವಾರು ಮಾಹಿತಿ
ಅನುಬಂಧ-01

| ಕ್ರಮ ಸಂಖ್ಯೆ | ಜಿಲ್ಲೆ | ಅಳತೆಯಾದ ಸಿ ದೇವಾಲಯಗಳ ಸಂಖ್ಯೆ | ಒತ್ತುವರಿಯಾದ ದೇವಾಲಯದ ಸಂಖ್ಯೆ | ಒತ್ತುವರಿ ವಿಸ್ತೀರ್ಣ | |
|---|---|---|---|---|---|
| | | | | ಎಕರೆ | ಗುಂಟೆ/ಸೆಂಟ್ಸ್ |
| 1 | Bagalkote | 909 | 0 | 0 | 0 |
| 2 | Bengaluru Urban | 30 | 0 | 0 | 0 |
| 3 | Bengaluru Rural | 1088 | 0 | 0 | 0 |
| 4 | Belagavi | 16 | 0 | 0 | 0 |
| 5 | Bellary | 3 | 0 | 0 | 0 |
| 6 | Bidar | 186 | 0 | 0 | 0 |
| 7 | Chamarajnagar | 83 | 16 | 75 | 3.5 |
| 8 | Chikkaballapur | 94 | 7 | 5 | 26 |
| 9 | Chikkamangaluru | 355 | 0 | 0 | 0 |
| 10 | chitradurga | 76 | 0 | 0 | 0 |
| 11 | Dakshina Kannada | 112 | 2 | 0 | 11 |
| 12 | Davanagere | 355 | 6 | 5 | 14 |
| 13 | Dharwad | 439 | 0 | 0 | 0 |
| 14 | Gadag | 0 | 0 | 0 | 0 |
| 15 | kalburgi | 0 | 0 | 0 | 0 |
| 16 | Hassan | 141 | 45 | 77 | 70 |
| 17 | Haveri | 0 | 0 | 0 | 0 |
| 18 | Kodagu | 0 | 0 | 0 | 0 |
| 19 | Kolar | 134 | 29 | 81 | 34 |
| 20 | Koppala | 0 | 0 | 0 | 0 |
| 21 | Mandhya | 0 | 0 | 0 | 0 |
| 22 | Mysuru | 596 | 0 | 0 | 0 |
| 23 | Raichur | 0 | 0 | 0 | 0 |
| 24 | Ramanagar | 0 | 0 | 0 | 0 |
| 25 | Shivamoga | 137 | 1 | 0 | 37.75 |
| 26 | Tumkur | 246 | 0 | 0 | 0 |
| 27 | Udupi | 0 | 0 | 0 | 0 |
| 28 | Uttara Kannada | 352 | 1 | 0 | 3.2 |
| 29 | Vijayanagar | 243 | 1 | 0 | 40 |
| 30 | Vijayapura | 0 | 0 | 0 | 0 |
| 31 | Yadgiri | 2 | 0 | 0 | 0 |
| | | 5597 | 108 | | |

ಷರಾ: ಆಯಾ ಪ್ರದೇಶಗಳಲ್ಲಿ ಬಳಸುವ ಅಳತೆಮಾಪಕ(units of measurement)ಕ್ಕನುಸಾರವಾಗಿ ಎಕರೆ/ಗುಂಟೆ ಅಥವಾ ಎಕರೆ/ಸೆಂಟ್ಸ್ ಗಳಲ್ಲಿ ಒತ್ತುವರಿ ವಿಸ್ತೀರ್ಣವನ್ನು ದಾಖಲಿಸಿದೆ